DEPARTMENT / SUBJECT:
NAME OF THE NEWS PAPER:
ದಿನಾಂಕ : DATE

# ದೋಣಿಮಲೈ ಗುತ್ತಿಗೆ ರಾಯಧನ ಹೆಚ್ಚಳ

## ಗಣಿಗಾರಿಕೆ ಸಂಬಂಧ ರಾಜ್ಯಕ್ಕೆ ಆದಾಯ ತರುವ ವಿಷಯಗಳ ಇತ್ಯರ್ಥ ■ ವಿಧಾನಸೌಧದಲ್ಲಿ ನಡೆದ ಮಹತ್ವದ ಸಭೆ

**ಬೆಂಗಳೂರು:** ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಲ್ಲಿ ಬಹುದಿನಗಳಿಂದ ಬಾಕಿ ಇದ್ದ ವಿಷಯಗಳ ಇತ್ಯರ್ಥಕ್ಕೆ ಚಾಲನೆದೊರೆತಿದ್ದು ರಾಜ್ಯ ಸರ್ಕಾರಕ್ಕೆನೀಡಲಾಗುತ್ತಿದ್ದ ಎನ್‌ಎಂಡಿಸಿ ದೋಣಿಮಲೈ ಗಣಿಗಾರಿಕೆ ಗುತ್ತಿಗೆ ರಾಯಧನ ಶೇ.37.25ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ವಿಧಾನಸೌಧದಲ್ಲಿ ಕೇಂದ್ರ ಗಣಿ ಹಾಗೂ ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಶಿ ಅವರೊಂದಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವರ ತಂಡ ನಡೆಸಿದ ಸಮಾಲೋಚನೆ ಸಂದರ್ಭದಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಇದ್ದ ಅಡೆತಡೆ ನಿವಾರಣೆಯಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ದೋಣಿಮಲೈ ಗುತ್ತಿಗೆಯಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿದ್ದ ಶೇ.15ರ ರಾಯಧನ ಪ್ರಮಾಣ ಶೇ.37.25 ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ದೋಣಿಮಲೈಯಲ್ಲಿ ಎನ್‌ಎಂಡಿಸಿ ಕಂಪನಿಗಳ 50 ವರ್ಷಗಳ ಗುತ್ತಿಗೆ ಅವಧಿ 2018 ಕ್ಕೆಮುಕ್ತಾಯಗೊಂಡಿದ್ದು ನವೀಕರಣ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಕೇಂದ್ರ ಗಣಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಪಾಲುದಾರರನ್ನೊಳಗೊಂಡ ಸಮಿತಿ ರಚಿಸಿ 2015ರ ನಂತರ ಹಂಚಿಕೆ ಮಾಡಿರುವ ಗಣಿಗಾರಿಕೆಗೆ ಯಾವ ಆಧಾರದ ಮೇಲೆ ಪ್ರೀಮಿಯಂ ನೀಡಬೇಕು ಎಂಬ ಬಗ್ಗೆ 3 ತಿಂಗಳ ಒಳಗೆ ನಿರ್ಧರಿಸಲಾಗುವುದು. ಆ ಸಮಿತಿ ಅಂತಿಮ ನಿರ್ಧಾರ ತೆಗೆದುಕೊಳ್ಳುವವರೆಗೆ ಶೇ.37.25 ರಾಯಧನ ಮುಂದುವರಿಯಲಿದೆ ಎಂದರು.

> **ಕೇಂದ್ರ ಸಚಿವ ಪ್ರಹ್ಲಾದ ಜೋಶಿಯವರು ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಸಮಸ್ಯೆಗಳ ಪರಿಹಾರಕ್ಕೆ ಆಸಕ್ತಿ ವಹಿಸಿ ಅಧಿಕಾರಿಗಳೊಂದಿಗೆ ಆಗಮಿಸಿ ಇತ್ಯರ್ಥಪಡಿಸಿದ್ದಾರೆ. ಇದಕ್ಕಾಗಿ ನಾನು ಅವರಿಗೆ ರಾಜ್ಯ ಸರ್ಕಾರದ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.**
>
> **• ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ**

ಮಹಾರಾಷ್ಟ್ರ ಬಾರಂಜಾದಲ್ಲಿ ವ್ಯಾಜ್ಯದ ಹಿನ್ನೆಲೆಯಲ್ಲಿ ಗಣಿಗಾರಿಕೆ ಸ್ಥಗಿತಗೊಳಿಸಿತ್ತು. ಈ ಮಧ್ಯೆ ಕಲ್ಲಿದ್ದಲು ಕಳುವಾಗಿರುವುದರಿಂದ ಕೋಲ್ ಕಂಟ್ರೋಲರ್ ಮೂಲಕ ಕಲ್ಲಿದ್ದಲು ಸಂಗ್ರಹದ ಮೌಲ್ಯಮಾಪನ ಮಾಡಿಸಿ ಮಹಾರಾಷ್ಟ್ರ ಸರ್ಕಾರಕ್ಕೆ ಸಲ್ಲಿಸಬೇಕಿರುವ ರಾಯಧನ ನಿಗದಿಪಡಿಸಲಾಗುವುದು. ಅಲ್ಲಿ ಕಲ್ಲಿದ್ದಲು ವಿಲೇವಾರಿ ಪ್ರಕ್ರಿಯೆ ಹಾಗೂ ಗಣಿಗಾರಿಕೆ ಪ್ರಾರಂಭಕ್ಕೆ ಅನುವು ಮಾಡಿಕೊಡಲು ಮಹಾರಾಷ್ಟ್ರಮುಖ್ಯಮಂತ್ರಿ ಒಪ್ಪಿದ್ದಾರೆ. ಇದರಿಂದ ರಾಜ್ಯಕ್ಕೆ ಆದಾಯ ಹೆಚ್ಚಲಿದೆ ಎಂದು ವಿವರಿಸಿದರು.

ಪ್ರಸ್ತುತ ಜಿ-2 ಮಟ್ಟದಲ್ಲಿ ಗಣಿಗಳನ್ನು ಹರಾಜು ಮಾಡುತ್ತಿದ್ದು, ರಾಜ್ಯ ಸರ್ಕಾರ 3ಜಿ ಮಟ್ಟದಲ್ಲಿ ಹರಾಜು ಮಾಡಲು ಮನವಿ ಮಾಡಿದೆ. ಇದಕ್ಕೆ ಸ್ಪಂದಿಸಿ ಜಿ-4 ಮಟ್ಟದಲ್ಲಿ ಹರಾಜು ಮಾಡಲು ಪರವಾನಗಿ ನೀಡಲಾಗುವುದು. ಇದರಿಂದ ಸಾಕಷ್ಟು ಉಪಯೋಗವಾಗುತ್ತದೆ ಎಂದು ಹೇಳಿದರು. ಸಭೆಯಲ್ಲಿ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್, ಕಂದಾಯ ಸಚಿವ ಆರ್. ಅಶೋಕ್, ಗಣಿ ಮತ್ತು ಭೂ ವಿಜ್ಞಾನ ಸಚಿವ ಸಿ.ಸಿ.ಪಾಟೀಲ್, ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಸೇರಿ ರಾಜ್ಯ ಹಾಗೂ ಕೇಂದ್ರದ ಹಲವು ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



**ವಿಧಾನಸೌಧದಲ್ಲಿ ಕೇಂದ್ರ ಗಣಿ ಹಾಗೂ ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಶಿ ಅವರೊಂದಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವರ ತಂಡ ಸಮಾಲೋಚನೆ ನಡೆಸಿತು.**

### ಸಭೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಮನವಿ

**ಕರ್ನಾಟಕಕ್ಕೆ ಒಡಿಶಾದ ಮಂದಾಕಿನಿ ಮತ್ತು ದುರ್ಗಾಪುರ ಕಲ್ಲಿದ್ದಲು ಗಣಿಗಳನ್ನು ವಹಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಅನುಮೋದನೆ ಕೋರಿ ಒಡಿಶಾ ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆ. ಆದರೆ, ಕೇಂದ್ರ ಸರ್ಕಾರ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು 2 ವರ್ಷ ತಡವಾಗುವುದರಿಂದ ಅನುಮೋದನೆ ನೀಡಿ ಗಣಿಗಾರಿಕೆಗೆ ಅವಕಾಶ ಕಲ್ಪಿಸಬೇಕು. ಸಿಂಗರೇಣಿ ಕಲ್ಲಿದ್ದಲು ಗಣಿಯಿಂದ ಪೂರೈಸಲಾಗುವ ಕಲ್ಲಿದ್ದಲು ಬೆಲೆ ದುಬಾರಿಯಾಗಿದ್ದು ಇದನ್ನು ಕಡಿಮೆ ಮಾಡಬೇಕು. ಕೆಪಿಸಿ ನಿಗಮಕ್ಕೆ ಸರಬರಾಜಾಗುವ 2.475 ದಶಲಕ್ಷ ಟನ್ ಕಲ್ಲಿದ್ದಲು ಜತೆಗೆ ಡಬ್ಲ್ಯೂಸಿಎಲ್ ವತಿಯಿಂದ 6 ದಶಲಕ್ಷ ಟನ್ ಕಲ್ಲಿದ್ದಲು ರಾಯಚೂರು ಶಾಖೋತ್ಪನ್ನ ಘಟಕಕ್ಕೆ ಸರಬರಾಜು ಮಾಡುವಂತೆ ಮುಖ್ಯಮಂತ್ರಿಯವರು ಸಭೆಯಲ್ಲಿ ಮನವಿ ಮಾಡಿದರು. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಸಚಿವರು ಭರವಸೆ ನೀಡಿದರು.**